ಎಂದರೆ ಹಿಂದಿನ ಸರ್ಕಾರ ಈ ಯೋಜನೆಗೆ ಹಣ ಕೊಡಲಿಲ್ಲ ಎಂದು ಆರೋಪಣೆ ಮಾಡುತ್ತಿಲ್ಲ. ಒಟ್ಟು 8 ಕೋಟಿ 40 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದೇವೆ. ಆದರೆ ಪುನರ್ವಿಮರ್ಶಿತ ಅಂದಾಜಿನ ಪ್ರಕಾರ ಇದಕ್ಕೆ ಸುಮಾರು 31 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಂಜೂರಾಗಿದ್ದುದು ಕೇವಲ 18 ಕೋಟಿ ರೂಪಾಯಿಗಳಿಗೆ. ಇದರಲ್ಲಿ 8 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇದೊಂದೇ ಪ್ರಾಜೆಕ್ಟ್ ಅಲ್ಲ ನಮ್ಮಲ್ಲಿ ತೆಗೆದುಕೊಂಡಿರತಕ್ಕ ಹಲವಾರು ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನೆಗೆ ಹೆಚ್ಚು ಹಣ ಕೊಟ್ಟು ಕೆಲಸ ಮಾಡಬೇಕೆಂದು ಹೇಳಿದರೂ ಸಂಪನ್ಮೂಲದ ಚೌಕಟ್ಟನ್ನು ಮೀರಿ ಹೋಗುವುದು ಕಷ್ಟವಿದೆ. ಮಾನ್ಯ ಸದಸ್ಯರು ಹೇಳುವುದನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲವನ್ನು ರೂಢಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಿಹಣ ಕೊಡುವುದಕ್ಕೆ ಪ್ರಯತ್ನಮಾಡೋಣ.

Smt. Mukhter Unnisa.—You have mentioned that the estimate has gone upto Rs. 1,850 lakhs. Is it not a fact that due to delay, the cost of cement, labour etc., are increased ?

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳತಕ್ಕದ್ದು ನಿಜ. ಎಷ್ಟು ಜಾಗ್ರತೆ ನಾವು ಕೆಲಸ ಮಾಡುತ್ತೇವೋ ಅಷ್ಟೂ ಕಡಿಮೆ ಖರ್ಚಿನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎಕ್ಸ್‌ಕಲೇಷನ್ ಮತ್ತು ಇನ್‌ಫ್ಲೇಷನ್‌ನಿಂದ ಅಂದಾಜು ಕೂಡ ಹೆಚ್ಚಾಗುತ್ತಾ ಹೋಗುತ್ತದೆ, ಹಣದ ಕೊರತೆಯಿಂದ ಕೆಲಸ ನಿಧಾನವಾಗಿದೆ.

ವಿಷಯ : ಕಾಪುವಿನಲ್ಲಿ ನಿರ್ಮಾಣ ಹಂತದಲ್ಲಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡ ಪೂರ್ಣಗೊಳಿಸುವ ವಿಚಾರ.

ಪ್ರ. ಸಂಖ್ಯೆ 26 (142) ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕಾಪುವಿನಲ್ಲಿ ನಿರ್ಮಾಣ ಹಂತದಲ್ಲಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡ ಯಾವಾಗ ಸಂಪೂರ್ಣಗೊಳ್ಳುವುದು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ ನಿರ್ಮಾಣವಾಗುತ್ತಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡವು ಕೊನೆಯ ಹಂತದಲ್ಲಿದೆ. ಮತ್ತು ಈ ಕಟ್ಟಡವನ್ನು ಆಗಸ್ಟ್ 85ರ ಅಂತ್ಯದೊಳಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ.

ಶ್ರೀ ವಸಂತ ಸಾಲಿಯಾನ (ಕಾಪು).—ಸನ್ಮಾನ್ಯ ಅಧ್ಯಕ್ಷರೆ, ಈ ಕಾಮಗಾರಿ 1981-82ನೇ ಇಸವಿಯಲ್ಲಿ ಪ್ರಾರಂಭವಾಗಿದ್ದುದು. ಈತನಕ ಅದು ಪೂರ್ಣವಾಗಲಿಲ್ಲ. ಸಣ್ಣ ಕಟ್ಟಡವಾಗಿರುವುದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ. ಆದಷ್ಟು ಜಾಗ್ರತೆ ವಿದ್ಯಾರ್ಥಿನಿ ನಿಲಯದ ಕೆಲಸವನ್ನು ಪೂರ್ಣಮಾಡಿ ಹರಿಜನ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಆಗಸ್ಟ್ ತಿಂಗಳಲ್ಲಿ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ಸಾಲಿಯಾನ.—ಹೋದ ಸಾರಿ ಕೂಡ ಕೇಳಿದ್ದೆ. ಇನ್ನೂ ಅದನ್ನು ಮುಗಿಸಿಲ್ಲ.

ಶ್ರೀ ವಿ. ಎಲ್. ಪಾಟೀಲ್.—ಕಟ್ಟಡ ಪೂರ್ಣವಾಗಿದೆ. ಕೆಲವು ಸಣ್ಣಪುಟ್ಟ ಕೆಲಸಗಳಿವೆ. ಆಗಸ್ಟ್ ತಿಂಗಳಿನಲ್ಲಿ ಎಲ್ಲ ಮುಗಿಸುತ್ತೇವೆ.

ಶ್ರೀ ವಸಂತ ಸಾಲಿಯಾನ.—1984ನೇ ಡಿಸೆಂಬರ್‌ನಲ್ಲೇ ಈ ಕೆಲಸ ಮುಗಿಯಬೇಕಾಗಿತ್ತು. ಆದರೆ ಕಾರಣಾಂತರದಿಂದ ಅದು ಮುಗಿಯಲಿಲ್ಲ. ಇದಕ್ಕೆ ಕಾರಣ ರಾಜಕೀಯ ಇರಬಹುದು, ಕಾಂಗ್ರೆಸ್ (ಐ) ಶಾಸಕರ ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡುತ್ತಿಲ್ಲ. ಆದ್ದರಿಂದ ಇಲ್ಲೂ ಅದೇ ರೀತಿ ಮಾಡುತ್ತಿರಬಹುದು ಎಂಬ ಕಲ್ಪನೆ ನಮಗೆ ಬರುತ್ತಿದೆ.

ಶ್ರೀ ವಿ. ಎಲ್. ಪಾಟೀಲ್.—ಅಧ್ಯಕ್ಷರೇ, ಇದರಲ್ಲಿ ರಾಜಕೀಯ ಇಲ್ಲ. ಮೊದಲು 9 ಲಕ್ಷ 95 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಕೆಲಸ ಪ್ರಾರಂಭವಾಯಿತು. ಈಗ ಈ ಅಂದಾಜು 11 ಲಕ್ಷ 46 ಸಾವಿರದ 363 ರೂಪಾಯಿಗಳಿಗೆ ಏರಿದೆ. ಕೆಲಸ ಮಾಡುವುದಕ್ಕೆ ಸ್ವಲ್ಪ ತಡವಾಗಿದೆ. ಆದರೆ ಇದರಲ್ಲಿ ರಾಜಕೀಯ ಏನೂ ಇಲ್ಲ. ಆಗಸ್ಟ್‌ನಲ್ಲಿ ಅದನ್ನು ಪೂರ್ತಿ ಮಾಡುತ್ತೇನೆ.

ಶ್ರೀ ವಸಂತ ಸಾಲಿಯಾನ.—ಈಗ ಕಾಮಗಾರಿ ನಿಂತುಹೋಗಿದೆ. ಕೆಲಸ ನಡೆಯುತ್ತಿಲ್ಲ. ನಾನು ಬೆಲ್ಲೇ ಇರುವವನು. ಪ್ರತಿದಿವಸ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇನೆ. ಕೆಲಸ ಆಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಮಾಡುತ್ತೇವೆ.

ಅಧ್ಯಕ್ಷರು.—ಈಗ ಸಭೆ ಪ್ರಾರಂಭವಾಗಿ 1 ಗಂಟೆ ಆಯಿತು. ಇನ್ನೂ 9 ಪ್ರಶ್ನೆಗಳು ಉಳಿದಿವೆ. ಇದನ್ನು ಲ್ಯಾಪ್ಸ್ ಮಾಡಬಹುದಾಗಿತ್ತು. ಆದರೆ ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಇವುಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ಅರ್ಧ ಗಂಟೆಯಲ್ಲಿ ಎಲ್ಲಾ ಮುಗಿಸೋಣ.

ವಿಷಯ : ಕೃಷ್ಣ ಗೋದಾವರಿ ಆಯೋಗದವರು ಮಾಡಿರುವ ನೀರಿನ ಹಂಚಿಕೆ

ಪ್ರಶ್ನೆ ಸಂಖ್ಯೆ 22 (166) ಶ್ರೀ ಎಸ್. ಎಸ್. ಕಡಪಟ್ಟಿ (ಹುನುಗುಂದ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಗೋದಾವರಿ ನಿಯೋಗದಿಂದ ರಾಜ್ಯಕ್ಕೆ ನಿಗದಿ ಪಡಿಸಿರುವ ನೀರಿನ ಪ್ರಮಾಣ ,

ಆ) ಕೃಷ್ಣಾ ಗೋದಾವರಿ ನಿಯೋಗದಿಂದ ನಿಗದಿಪಡಿಸಿರುವ ಪೂರ್ತಿ ನೀರನ್ನು ಕ್ರಿ. ಶ. 2000ದ ಒಳಗೆ ಉಪಯೋಗಿಸಿಕೊಳ್ಳಲು ಸರ್ಕಾರವು ತೆಗೆದುಕೊಂಡಿರುವ ಕ್ರಮ (ಯೋಜನಾವಾರು ಮತ್ತು ವಾರ್ಷಿಕವಾರು ವಿವರವನ್ನು ಮಂಡಿಸುವುದು);

ಇ) ತಗಲುವ ವೆಚ್ಚ ಮತ್ತು ಈ ವಿಷಯದಲ್ಲಿ ತೊಂದರೆಗಳನ್ನು ಹೇಗೆ ನಿವಾರಿಸಲು ಸರ್ಕಾರವು ಯೋಚಿಸಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ನೀರಿನ ವಿವಾದ ನ್ಯಾಯಮಂಡಳಿ ತೀರ್ಪಿನಂತೆ ಕೃಷ್ಣಾ ಜಲಾನಯನದಲ್ಲಿ ರಾಜ್ಯಕ್ಕೆ ನಿಗದಿ ಪಡಿಸಿರುವ ನೀರಿನ ಪ್ರಮಾಣ 734 ಟಿಎಂಸಿ (ಸಹಸ್ರ ದಶಲಕ್ಷ ಘನ ಅಡಿಗಳು) ಗೋದಾವರಿ ನೀರಿನ ವಿವಾದದ ನ್ಯಾಯಮಂಡಲಿಯ ತೀರ್ಪಿನಿಂದಾಗಿ ಗೋದಾವರಿ ಜಲಾನಯನ ಪ್ರದೇಶ ನೀರಿನ ತಿರುಗಣಿಯಿಂದ ಕೃಷ್ಣಾ ಜಲಾಶಯದಲ್ಲಿ ಕರ್ನಾಟಕಕ್ಕೆ ನಿಗದಿಯಾಗಿರುವ ಹೆಚ್ಚಿನ ನೀರಿನ ಪ್ರಮಾಣ 21 ಟಿಎಂಸಿ. ಗೋದಾವರಿ ನೀರಿನ ವಿವಾದದ ನ್ಯಾಯ ಮಂಡಲಿಯ ತೀರ್ಪಿನಿಂದ ಕರ್ನಾಟಕದ ಗೋದಾವರಿ ಜಲಾನಯನದ ಮಂಜ್ರಾ ಉಪ ಜಲಾನಯನದಲ್ಲಿ ನಿಗದಿಯಾಗಿರುವ ನೀರಿನ ಪ್ರಮಾಣ 22.37 ಟಿಎಂಸಿ (ಅಂದರೆ 22 ಟಿಎಂಸಿ).

ಆ) ಮೇಲ್ಕಾಣಿಸಿದ 734 ಟಿಎಂಸಿ ನೀರಿನ ಯೋಜನಾವಾರು ನಿಗದಿ ಮಾಡಿರುವ ಪಟ್ಟಿ ಮಾಡಲಾಗಿದೆ. (ಕೃಷ್ಣಾ ಜಲಾನಯನಕ್ಕೆ ಸಂಬಂಧಿಸಿದ ವಿವರಣಾ ಪತ್ರ ಒಂದು) ಗೋದಾವರಿ ಜಲವಿವಾದ ನ್ಯಾಯ ಮಂಡಲಿ ತೀರ್ಪಿನಲ್ಲಿ ಗೋದಾವರಿಯಿಂದ ಕೃಷ್ಣಗೆ ತಿರುಗಣಿಯಾಗುವ ನೀರಿನಲ್ಲಿ ಕರ್ನಾಟಕ ರಾಜ್ಯಕ್ಕೆ ನಿಗದಿಯಾಗಿರುವ 21 ಟಿಎಂಸಿ ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ. ಕೃಷ್ಣಾ ಜಲಾನಯನದಲ್ಲಿ ನಿರ್ವಹಣೆಯಲ್ಲಿರುವ ಹಾಲಿ ನಡೆಯುತ್ತಿರುವ ಮತ್ತು ಮುಂದೆ ಯೋಜಿಸಲಾಗುವ ಯೋಜನೆಗಳ ವಿವರಗಳನ್ನು ವಿವರಣಾ ಪತ್ರ 1 ರಲ್ಲಿ ಕೊಟ್ಟಿದೆ.

ಗೋದಾವರಿ ನೀರಿನ ವಿವಾದದ ನ್ಯಾಯಮಂಡಲಿಯ ತೀರ್ಪಿನಲ್ಲಿ ಗೋದಾವರಿ ನದಿಯಿಂದ ಲಭ್ಯವಾಗುವ 22.37 ಟಿಎಂಸಿ ನೀರನ್ನು ನಿರ್ವಹಣೆಯಲ್ಲಿರುವ ಹಾಲಿ ನಡೆಯುತ್ತಿರುವ ಮತ್ತು ಮುಂದೆ ಯೋಜಿಸಲಾಗಿರುವ ಯೋಜನೆಗಳಿಗೆ ಉಪಯೋಗಿಸುವ ವಿವರಗಳನ್ನು ವಿವರಣಾ ಪತ್ರ 2ರಲ್ಲಿ ಕೊಟ್ಟಿದೆ.

ಇ) ಕೃಷ್ಣಾ ಜಲಾನಯನದಲ್ಲಿ ಈಗ ನಡೆಯುತ್ತಿರುವ ಭಾರಿ ಮತ್ತು ಮಾಧ್ಯಮ ನೀರಾವರಿ ಯೋಜನೆಗಳಿಗೆ ಬೇಕಾಗಿರುವ ಹಣ 1207 ಕೋಟಿ ರೂ.ಗಳು. ಕೃಷ್ಣಾ ಜಲಾನಯನದಲ್ಲಿ ಉದ್ದೇಶಿತ ಯೋಜನೆಗಳಿಗೆ ಬೇಕಾಗಿರುವ ಹಣ 788 ಕೋಟಿ ರೂ.ಗಳು ಗೋದಾವರಿ ಜಲಾನಯನ ಪ್ರದೇಶದಲ್ಲಿ ಈಗ ನಡೆಯುತ್ತಿರುವ ಭಾರಿ ಮತ್ತು ಮಾಧ್ಯಮ ನೀರಾವರಿ ಯೋಜನೆಗಳಿಗೆ ಬೇಕಾಗಿರುವ ಹಣ 38 ಕೋಟಿ ರೂ.ಗಳು. ಗೋದಾವರಿ ಜಲಾನಯನದಲ್ಲಿರುವ ಉದ್ದೇಶಿತ ಯೋಜನೆಗಳಿಗೆ ಬೇಕಾಗಿರುವ ಹಣ 5.13 ಕೋಟಿ ರೂ ಗಳು. ಈ ಯೋಜನೆಗಳಿಗೆ ಸರ್ಕಾರವು ವಾರ್ಷಿಕ ಆಯವ್ಯಯಗಳಲ್ಲಿ ಹಣ ಒದಗಿಸಲು ಯೋಜಿಸಿದೆ. 1985-86ನೇ ಸಾಲಿನಲ್ಲಿ 100 ಕೋಟಿ ರೂ.ಗಳು ತದರ್ಥಕ (ಅಡಹಾಕ್) ಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ವಿಶ್ವಬ್ಯಾಂಕಿನ ಧನ ಸಹಾಯವನ್ನು ಕೂಡ ಅಪೇಕ್ಷಿಸಲು ಉದ್ದೇಶಿಸಲಾಗಿದೆ.